MVC No. 315/2020 PW-1

<u>ದಿನಾಂಕ 13.06.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ 2 ಪರ ಶ್ರೀ ಜೆ ಎಸ್ ವಕೀಲರಿಂದ ಃ</u>

ನಾನು ಊರಿನಿಂದ ಚೆಕ್ಕೆರೆ ಗ್ರಾಮಕ್ಕೆ ಬಸವರಾಜುರವರ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ವಾಹನವನ್ನು ನಾನು ಚಾಲನೆ ಮಾಡುತ್ತಿರಲಿಲ್ಲ. ಬಸವರಾಜುರವರಿಗೆ ಡಿಎಲ್ ಇತ್ತು. ಬೆಂಗಳೂರು ಕಡೆಯಿಂದ ಬುಲೆಟ್ ವಾಹನ ಬಂದು ಎದುರುಗಡೆಯಿಂದ ಡಿಕ್ಕಿ ಪಡಿಸಿರುತ್ತದೆ. ನಾವೇ ಮಾತನಾಡಿಕೊಂಡು ಹೋಗಿ ಅಪಘಾತ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ಬುಲೆಟ್ 50-60 ಅಡಿ ದೂರದಿಂದ ಬಂದಾಗ ನೋಡಿರುತ್ತೇನೆ. ನಮ್ಮ ವಾಹನಕ್ಕೆ ಜಖಂ ಆಗಿರುವ ಬಗ್ಗೆ ಗೊತ್ತಿಲ್ಲ. ಎದುರುದಾರರ 1 ರವರು ದೂರನ್ನು ನೀಡಿರುತ್ತಾರೆ. ನನಗೆ ಎದೆ ಮತ್ತು ಕಾಲಿಗೆ ಗಾಯವಾಗಿರುತ್ತದೆ. ಅಪಘಾತವಾದಾಗ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಚನ್ನಪಟ್ಟಣಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದರು ನಂತರ ಮಂಡ್ಯ ಸರ್ಕಾರಿ ಆಸ್ಪತ್ರೆ ಹೋದೆವು ನಂತರ ನನಗೆ ಜ್ಞಾನ ತಪ್ಪಿತು. ನನಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಅಪಘಾತದ ಬಗ್ಗೆ ವೈದ್ಯಾಧಿಕಾರಿಯವರಿಗೆ ತಿಳಿಸಿದ ಬಗ್ಗೆ ಗೊತ್ತಿಲ್ಲ. ಬಸವರಾಜುರವರಿಗೆ ಮೂಗೇಟು ಆಗಿತ್ತು. ವಿಮೆ ಇರುವ ವಾಹನದ ಮೇಲೆ 10 ದಿನ ತಡವಾಗಿ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸುಳ್ಳು. ಪೋಲಿಸರು ಹೇಳಿಕೆ ಪಡೆದ ಬಗ್ಗೆ ಗೊತ್ತಿಲ್ಲ.ನನಗೆ ಚಿಕಿತ್ಸೆ ನೀಡಿದ ವೈದ್ಯರನ್ನು ಸಾಕ್ಷಿ ನುಡಿಸಲು ತೊಂದರೆ ಇಲ್ಲ.ಆಸ್ಪತ್ರೆಯಿಂದ ನನಗೆ ಯಾವುದೇ ಖರ್ಚಾಗಿಲ್ಲ ಎಂದರೆ ಸುಳ್ಳು. ಆಸ್ಪತ್ರೆಯ ಖರ್ಚು 2 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇಲ್ಲ. ಅಪಘಾತವಾದಾಗ ನನಗೆ 45 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ನನಗೆ 34 ವರ್ಷ ವಯಸ್ಸಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಕೂಲಿ ಕೆಲಸ ಮಾಡಿ 15 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.ಅಪಘಾತದಿಂದ ನನಗೆ

ಯಾವುದೇ ರೀತಿಯ ತೊಂದರೆ ಆಗಿಲ್ಲ ಎಂದರೆ ಸುಳ್ಳು. ಪರಿಹಾರ ಬರಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಔಷಧಿ ಬಿಲ್ಲುಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸುಳ್ಳು.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.